


ಜೂಲಿಯಸ್ ಸೀಜರ್
Julius caesar
ಸಪ್ನ
logi


ಜೂಲಿಯಸ್ ಸೀಜರ್
Julius Caesar
ಸಪ್ನ
logi

Published by :
**Sapna Book House (P) Ltd.,**
R.O. #11, 3rd Main Road,
Gandhinagar, Bengaluru- 560 009
Ph: 080-40114455

ISBN : 978-93-86631-88-6

**First Edition : 2017**

Pages : 64
Book Size : 1-8th Demi
Paper Used : 18.6 kg (70 gsm) N.S. Maplitho

Copyright © Macaw Books, 2012

*Licensor :*
**Sweet Cherry Publishing Limited, 2015**
Unit E, Vulcan Business Complex,
Vulcan Road,
Leicester, LE5 3EB,
United Kingdom

*Licensee :*
**Sapna Book House (P) Ltd., India 2015**

All rights reserved. No part of this publication may be reproduced or utilized in any form or by any means, electronic or mechanical, including photocopying, recording, or using any information storage and retrieval system, without prior permission in writing from the publisher.



## ಷೇಕ್ಸ್‌ಪಿಯರ್

ಇಂಗ್ಲಿಷ್ ಭಾಷೆಯಲ್ಲಿ ಅತ್ಯಂತ ಶ್ರೇಷ್ಠ ಬರಹಗಾರ ಎನಿಸಿಕೊಂಡ ವಿಲಿಯಂ ಷೇಕ್ಸ್‌ಪಿಯರ್ ಇಂಗ್ಲೆಂಡ್‌ನ ವಾರ್‌ವಿಕ್‌ಷೈರ್‌ನಲ್ಲಿರುವ ಸ್ಟ್ರಾಟ್‌ಫರ್ಡ್-ಅನ್-ಏವನ್‌ನಲ್ಲಿ (ಸುಮಾರು 1564ರ ಏಪ್ರಿಲ್ 23ರಂದು) ಹುಟ್ಟಿದ. ಜಾನ್ ಮತ್ತು ಮೇರಿ ಷೇಕ್ಸ್‌ಪಿಯರ್ ದಂಪತಿಗಳ ಎಂಟು ಮಕ್ಕಳಲ್ಲಿ ಇವನು ಮೂರನೆಯವನು.

ಷೇಕ್ಸ್‌ಪಿಯರ್ ಕವಿ, ರಂಗಭೂಮಿಗೆ ನಾಟಕಗಳನ್ನು ಬರೆದವನು ಮತ್ತು ನಾಟಕಕಾರ. ಅವನನ್ನು ಇಂಗ್ಲೆಂಡ್‌ನ ರಾಷ್ಟ್ರಕವಿ ಎಂದೂ 'ಏವನ್‌ನ ಕವಿ' ಎಂದೂ ಕರೆಯುತ್ತಾರೆ. ಅವನು 38 ನಾಟಕಗಳನ್ನು, 154 ಸುನೀತಗಳನ್ನು, ಎರಡು ದೀರ್ಘ ವೃತ್ತಾಂತ ಕವನಗಳನ್ನು ಬರೆದನೆಂದು ಹೇಳುತ್ತಾರೆ. ಷೇಕ್ಸ್‌ಪಿಯರ್ ನಾಟಕಗಳನ್ನು ಜಗತ್ತಿನಲ್ಲಿ ಬಳಕೆಯಲ್ಲಿರುವ ಪ್ರತಿಯೊಂದು ಭಾಷೆಗೂ ಅನುವಾದ ಮಾಡಿದ್ದಾರೆ. ಜಗತ್ತಿನ ಬೇರಾವುದೇ ನಾಟಕಕಾರನ ನಾಟಕಗಳಿಗಿಂತ ಇವನ ನಾಟಕಗಳು ಹೆಚ್ಚು ಅಭಿನಯವಾಗುತ್ತಿವೆ.



ಜೂಲಿಯಸ್ ಸೀಜರ್ : ಈತ ರೋಮನ್ ಗಣರಾಜ್ಯದ ರಾಷ್ಟ್ರೀಯ ಪರಿಷತ್ತಿನ ಸದಸ್ಯನಾಗಿದ್ದ. ಪಾಂಪೆ ಪುತ್ರರನ್ನು ಕೊಂದು ಅದ್ಭುತ ವಿಜಯದೊಂದಿಗೆ ರೋಮ್‌ಗೆ ಹಿಂದಿರುಗಿದ್ದ. ಈತನ ಶೌರ್ಯ ಮುಂದಾಳತ್ವವನ್ನು ನೋಡಿ ಈತನಿಗೆ ಮಹಾರಾಜನಾಗುವಂತೆ ಸಲಹೆ ನೀಡಲಾಯಿತು. ಇಂತಹ ಸಲಹೆಯನ್ನು ಈತ ಒಂದಲ್ಲ ಮೂರು ಬಾರಿ ತಿರಸ್ಕರಿಸಿದ್ದ. ಆದರೂ ರೋಮ್ ಸಾಮ್ರಾಜ್ಯವನ್ನಾಳುವ ಆಸೆಯನ್ನು ಹೊಂದಿದ್ದ.



ಆಕ್ಟೇವಿಯಸ್ ಸೀಜರ್ : ಈತ ಜೂಲಿಯಸ್ ಸೀಜರ್‌ನ ಸೋದರನ ಮಗ. ಜೂಲಿಯಸ್ ಸೀಜರ್‌ನ ಮರಣದ ನಂತರ ರೋಮ್ ರಾಜ್ಯದ ರಾಜನಾಗುತ್ತಾನೆ. ಈತ ಸಹ ಜೂಲಿಯಸ್‌ನಂತೆ ಬುದ್ಧಿವಂತ. ಈತ ಮಾರ್ಕ್ ಆಂಟನಿಯ ಜತೆಗಿದ್ದು ಕೊಂದು ಸಂಚುಕೋರರ (ಬ್ರೂಟಸ್, ಕಾಸಿಯಸ್ ಮತ್ತಿತರರು) ವಿರುದ್ಧವಾಗಿರುತ್ತಾನೆ.

ಮಾರ್ಕ್ ಆಂಟನಿ : ಈತ ಜೂಲಿಯಸ್ ಸೀಜರ್‌ನ ನಿಕಟ ಸ್ನೇಹಿತ. ಸೀಜರನ ಬಗ್ಗೆ ಬಹಳ ಗೌರವ ನಿಷ್ಠೆಗಳನ್ನಿಟ್ಟುಕೊಂಡಿದ್ದವನು. ಈತನೊಬ್ಬ ಬುದ್ಧಿವಂತ, ಸಹಜತೆಯಿಂದ ನಡೆದುಕೊಳ್ಳುತ್ತಿದ್ದ. ದಕ್ಷನೂ ಸಮರ್ಥನೂ ಆಗಿದ್ದ ಈತ ಮುಂದೆ ಬ್ರೂಟಸ್ ಮತ್ತು ಕಾಸಿಯಸ್‌ನ ಪಾಲಿಗೆ ಮುಳ್ಳಾಗುತ್ತಾನೆ.



ಬ್ರೂಟಸ್ : ಸೀಜರನ ವಿರುದ್ಧ ಸಂಚು ಏರ್ಪಡಿಸಿದವರಲ್ಲಿ ಬ್ರೂಟಸ್ ಸಹ ಪ್ರಮುಖ. ಉನ್ನತ ಕುಲದಿಂದ ಬಂದಿದ್ದ ಈತನನ್ನು ಸಂಚುಕೋರರು ಸೀಜರನಿಗೆ ವಿರುದ್ಧವಾಗುವಂತೆ ಮಾಡಿದರು. ಬ್ರೂಟಸ್ ಸೀಜರನ ಮಿತ್ರನೆ ಆಗಿದ್ದ. ಆದರೆ ಮುಂದೊಂದು ದಿನ ಸೀಜರ್ ಪ್ರಜಾಪ್ರಭುತ್ವವನ್ನು ಕಡೆಗಣಿಸಿ, ತಾನೆ ರಾಜನಾಗಬಹುದೆಂಬ ಭಯ ಈತನನ್ನು ಸಂಚುಕೋರರ ಗುಂಪಿಗೆ ಸೇರಿಸಿತು. ಒಟ್ಟಿನಲ್ಲಿ ಈತನಿಗೆ ವೈಯಕ್ತಿಕ ಹಿತಾಸಕ್ತಿಗಳಿಗಿಂತ ರೋಮ್ ದೇಶದ ಅಭ್ಯುದಯ ಬಹುಮುಖ್ಯವಾಗಿತ್ತು.



## ಜೂಲಿಯಸ್ ಸೀಜರ್

ರೋಮ್ ನಗರದ ಬೀದಿಗಳಲ್ಲಿ ಜನ ಸಂದಣಿ ಹೆಚ್ಚತೊಡಗಿತ್ತು. ಈ ಜನರೆಲ್ಲ ಅಲ್ಲಿ ನೆರೆದಿದ್ದ ಕಾರಣವೆಂದರೆ, ಶತ್ರುಗಳ ಮೇಲೆ ಜಯಗಳಿಸಿದ್ದ ಜೂಲಿಯಸ್ ಸೀಜರ್ ಈಗ ಅಲ್ಲಿಗೆ ಬರಲಿದ್ದ. ಆತ ಆಗಷ್ಟೆ ಪಾಂಪೆಯ ಬಲಿಷ್ಠಮಕ್ಕಳನ್ನು ಕೊಂದು ಬಂದಿದ್ದ.







ಜೂಲಿಯಸ್ ಸೀಜರ್, ಈ ರೀತಿ ಹೆಸರು ಗಳಿಸುತ್ತಾ ಹೋದಂತೆಲ್ಲಾ ಆತನ ಸಹಚರರಿಗೆ ಭಯ ಕಾಡತೊಡಗಿತು. ಬಹುಶಃ ಸೀಜರ್, ತಾನೇ ರಾಜನೆಂದು ಘೋಷಿಸಿ ಬಿಡಬಹುದು ಎಂಬ ಕಾರಣದಿಂದ.

ಸಾರ್ವಜನಿಕರು ಸೀಜರನನ್ನು ಮುತ್ತಿಕೊಂಡು ಜಯಕಾರ ಹಾಕುತ್ತಿದ್ದರು.

ಜೂಲಿಯಸ್ ಸೀಜರ್ ಈಗ ಪಾಂಪೆಯ ಮಕ್ಕಳನ್ನು ಹತಗೊಳಿಸಿದ್ದನು. ಹೀಗೆ ಜೂಲಿಯಸ್ ಸೀಜರ್ ಮುಂದುವರೆಯುತ್ತಿದ್ದಾಗ ಕಣಿ ಹೇಳುವವನೊಬ್ಬ (ಭವಿಷ್ಯ ನುಡಿಯುವವನು) ಸೀಜರನಿಗೆ ಹೇಳುತ್ತಾನೆ. “ಮಾರ್ಚ್ 15ರ ಬಗ್ಗೆ ಎಚ್ಚರವಾಗಿರು!” ಎಂದು, ಆದರೆ ಸೀಜರ್ ಈ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ.





ಅಂದಿನ ದಿನಗಳಲ್ಲಿ ರೋಮ್ ಒಂದು ಗಣರಾಜ್ಯವಾಗಿತ್ತು. ಆಡಳಿತವನ್ನು ಪ್ರಜಾ ಪ್ರತಿನಿಧಿಗಳು ನಿರ್ವಹಿಸುತ್ತಿದ್ದರು. ಒಳ್ಳೆಯ ಆಡಳಿತಗಾರರು, ವಾಗ್ಮಿಗಳು ಈ ಗಣರಾಜ್ಯ ಪರಿಷತ್ತಿನ ಸದಸ್ಯರಾಗಿರುತ್ತಿದ್ದರು. ತಮ್ಮ ಗಣರಾಜ್ಯದ ಬಗ್ಗೆ ರೋಮನ್ನರಿಗೆ ಬಹಳ ಹೆಮ್ಮೆ ಇತ್ತು. ಯಾವುದೇ ಕಾರಣಕ್ಕೂ ತಮ್ಮ ರಾಜ್ಯಾಡಳಿತವನ್ನು ಮಹಾರಾಜನಿಗೆ ಅಥವಾ ಸೀಜರ್‌ನಿಗೆ ಒಪ್ಪಿಸಲು ಅವರು ಸಿದ್ಧರಿರಲಿಲ್ಲ.

..

ಜೂಲಿಯಸ್ ಸೀಜರ್‌ನ ವರ್ಚಸ್ಸು ಬಹಳ ತೀವ್ರಗತಿಯಿಂದ ಹೆಚ್ಚುತ್ತಿದ್ದುದರಿಂದ ಕೆಲವರಿಗೆ ಆತನ ಮೇಲೆ

ಜೂಲಿಯಸ್ ಸೀಜ಼ರ್, ಮಹಾರಾಜನಾಗಲು ಅರ್ಹನೆಂಬ, ಮಾರ್ಕ್ ಆಂಟನಿಯ ಸಲಹೆಯನ್ನು ಸೀಜ಼ರ್ ಮೂರು ಬಾರಿ ತಳ್ಳಿಹಾಕಿದ್ದ.

ಸೀಜ಼ರ್ ಮಹಾರಾಜನಾಗಲು ಒಲ್ಲದಿರುವ ವಿಷಯ ಅಲ್ಲಿನ ಜನರಿಗೆ ಬಹಳ ಸಂತಸ ಉಂಟು ಮಾಡಿತ್ತು. ಆದರೆ ಇದರಿಂದ ಸೀಜ಼ರನಿಗೇನೂ ಸಮಾಧಾನವಾಗಲಿಲ್ಲ. ಸೂಕ್ಷ್ಮಮತಿಯಾದ ಕಾಸಿಯಸ್ ಇದನ್ನು ಗಮನಿಸಿದ್ದ. ಈ ಬಗ್ಗೆ ಆತನಿಗೆ ಸೀಜ಼ರ್‌ನ ಮೇಲೆ ಅನುಮಾನವಿತ್ತು.



ಕಾಸಿಯಸ್ ಈ ವಿಷಯದ ಬಗ್ಗೆ ಬ್ರೂಟಸ್ ಜತೆ ಮಾತನಾಡಿದ. ಬ್ರೂಟಸ್ ಸೀಜ಼ರನ ಪರಮಮಿತ್ರ, ಆದರೂ ಪ್ರಜಾಪ್ರಭುತ್ವದ ವಿಷಯದಲ್ಲಿ ಬ್ರೂಟಸ್ ಬಹಳ ಅಭಿಮಾನಿಯಾಗಿದ್ದ. ಕಾಸಿಯಸ್ ಬ್ರೂಟಸ್‌ನಿಗೆ ಹೇಳಿದ :





"ನಾನು ನೀನು, ಮಾರ್ಕ್ ಎಲ್ಲರೂ ಸೀಜ಼ರ್‌ನ ಸಮಾನರು. ನಾವೆಲ್ಲರು ಗಣಪರಿಷತ್ತಿನ ಸದಸ್ಯರು. ಹೀಗಿರುವಲ್ಲಿ, ನಮ್ಮನ್ನು ಮೀರಿ ಸೀಜ಼ರ್‌ನು ರಾಜನಾಗಲು ನಾವು ಅವಕಾಶ ಮಾಡಿಕೊಡಬಾರದು".

ಬ್ರೂಟಸ್‌ನಿಗೆ ಸಹ ಇದು ಸರಿ ಎನಿಸಿತು. ಈ ನಡುವೆ ಪರಿಷತ್ತಿನ ಸದಸ್ಯ 'ಕಾಸ್ಕ' ಸಹ ಅಲ್ಲಿಗೆ ಬಂದ. ಆತನ ಅಭಿಪ್ರಾಯ ಸಹ ಅದೇ ರೀತಿ ಇತ್ತು. ಇದಕ್ಕೆ ಏನಾದರೊಂದು ಉಪಾಯ ಮಾಡಬೇಕೆಂದು ಎಲ್ಲರೂ ಬ್ರೂಟಸ್‌ನನ್ನು ಬೇಡಿಕೊಂಡರು.

ಸೀಜ಼ರ್‌ನ ವಿರುದ್ಧ ಸಂಚು ಪ್ರಬಲಗೊಳ್ಳತೊಡಗಿತು. ಇನ್ನೂ ಅನೇಕ ಮಂದಿ ಸಂಚುಕೋರರು ಈ ಗುಂಪನ್ನು ಸೇರಿದರು.

ಇದರಿಂದ ಸಂತೃಪ್ತಿ ಹೊಂದದ ಕಾಸಿಯಸ್. ಇನ್ನೂ ಅನೇಕ ಸದಸ್ಯರ ಹೆಸರಿನಲ್ಲಿ ತಾನೆ ಪತ್ರ ಬರೆದು ಬ್ರೂಟಸ್‌ನ ಮನೆಗೆ ತಲುಪಿಸುವಂತೆ ಮಾಡಿದ.

ಬಹಳ ಮಂದಿ ಸದಸ್ಯರು ಸೀಜ಼ರನ ವಿರುದ್ಧವಾಗಿರುವರೆಂಬ ಅಭಿಪ್ರಾಯವನ್ನು ಬ್ರೂಟಸ್‌ನಲ್ಲಿ ಮೂಡಿಸಲು ಕಾಸಿಯಸ್ ಪ್ರಯತ್ನಿಸುತ್ತಿದ್ದ. ಬೇರೆಯವರ ಹೆಸರಿನಲ್ಲಿ ಪತ್ರಗಳನ್ನು ಸಹ ಬರೆದು ಬ್ರೂಟಸ್‌ಗೆ ತಲುಪುವಂತೆ ಮಾಡಿದ.









ಆದೊಂದು ಭಯಂಕರ ರಾತ್ರಿ. ಚಂಡಮಾರುತ ಲಗ್ಗೆ ಹಾಕುವ ಎಲ್ಲ ಸೂಚನೆಗಳೂ ಇದ್ದುವು. ಸ್ವರ್ಗದಲ್ಲಿ ದೇವತೆಗಳು ಯುದ್ಧ ಮಾಡುತ್ತಿರಬಹುದೆಂಬ ಭಾವನೆ ಬರುತ್ತಿತ್ತು. ಇಂತಹ ಸಮಯದಲ್ಲಿ ಕಾಸ್ಕ ಸಿಸಿರೊ ಎಂಬ ವೃದ್ಧ ಸದಸ್ಯನನ್ನು ಭೇಟಿಮಾಡಿದ. ರೋಮನ್ ಪರಿಷತ್ತಿನ ಪ್ರಮುಖ ಸದಸ್ಯರು ಸಭೆ ಸೇರುತ್ತಾರೆ ಎಂದು ಆತ ಹೇಳಿದ.

ಏನೇ ಆದರೂ ಸೀಜ಼ರನು ಸರ್ವಾಧಿಕಾರಿಯಾಗಲು ಬಿಡಬಾರದೆಂಬುದೆ ಇವರ ಅಭಿಮತವಾಗಿತ್ತು. ಈಗ ಸಿನ್ನ ಎಂಬ ಮತ್ತೊಬ್ಬ ಸದಸ್ಯ ಸಹ ಇವರ ಜತೆ ಸೇರಿದ.

ಸೀಜ಼ರನಿಗೆ ಆಪ್ತನಾಗಿದ್ದ ಬ್ರೂಟಸ್‌ಗೆ ಇಂದು ರಾತ್ರಿ ನಿದ್ರೆ ಬರಲಿಲ್ಲ. ಆತ ಕಾಸಿಯಸ್ ಹೇಳಿದ್ದ ವಿಚಾರದ ಬಗ್ಗೆಯೆ ಯೋಚಿಸುತ್ತಿದ್ದ.



ಸೀಜ಼ರನ ಬಗ್ಗೆ ವೈಯಕ್ತಿಕ ದ್ವೇಷವಿಲ್ಲದಿದ್ದರೂ ರೋಮ್‌ನ ಪ್ರಜಾಪ್ರಭುತ್ವ ಉಳಿಸಲು ಈ ಕಾರ್ಯಮಾಡಬೇಕಾಗಿದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಸೀಜ಼ರನನ್ನು ಈಗಲೆ ಹತ್ಯೆ ಮಾಡದಿದ್ದರೆ ಆತ ದೊರೆಯಾಗಬಹುದು. ಹಾವಿನ ಮೊಟ್ಟೆಗಳನ್ನು ಅವುಗಳು ಮರಿಯಾಗುವುದರೊಳಗೆ ನಾಶಮಾಡಬೇಕು. ಅಷ್ಟರಲ್ಲಿ ಬ್ರೂಟಸ್‌ನ ಸೇವಕ ಕೆಲವು ಪತ್ರಗಳನ್ನು ಬ್ರೂಟಸ್‌ನಿಗೆ ಇತ್ತನು. ಅವುಗಳನ್ನು ಓದಿದ ಮೇಲೆ ಬ್ರೂಟಸ್‌ನ ಉದ್ವೇಗ ಹೆಚ್ಚಿತು. ಮಾರನೆಯ ದಿನವೇ ಮಾರ್ಚ್ 15 ಆಗಿದ್ದು ಸೀಜ಼ರನಿಗೆ ಅದು ಅಶುಭ ದಿನವೆಂದು ಕಣಿ ಹೇಳುವವನು ತಿಳಿಸಿದ್ದ.







ಸಂಚುಕೋರರೆಲ್ಲ ಒಬ್ಬೊಬ್ಬರಾಗಿ ಬಂದು ಸೇರಿದರು. ಅವರೆಲ್ಲ ಮುಖಕ್ಕೆ ಮುಸುಕು ಹಾಕಿಕೊಂಡಿದ್ದರು. ಮಾರನೆಯ ದಿನವ ಸೀಜ಼ರನನ್ನು ಕೊಲ್ಲಲು ಸಂಚು ರೂಪಿಸಲಾಯಿತು.

ಮಾರನೆಯ ದಿನವೇ ಪರಿಷತ್ತಿನ ಸಭೆ ನಡೆಯಲಿತ್ತು. ಸೀಜ಼ರನು ಅಲ್ಲಿಗೆ ಬಂದಾಗ ಆತನನ್ನು ಕೊಲ್ಲುವುದೆಂದು ತೀರ್ಮಾನಿಸಲಾಯಿತು. ಕಾಸಿಯಸ್, ಮಾರ್ಕ್ ಆಂಟನಿಯನ್ನು ಸಹ ಕೊಲ್ಲಬೇಕೆಂದು ಸೂಚಿಸಿದ, ಆದರೆ ಬ್ರೂಟಸ್ ಇದಕ್ಕೆ ಒಪ್ಪಲಿಲ್ಲ. ಈಗ ಅವರ ಮುಂದಿದ್ದ ಪ್ರಶ್ನೆ ಏನೆಂದರೆ ಕಣಿಯವನ ಮಾತು ನಂಬಿ (ಮಾರ್ಚ್ 15) ಸೀಜ಼ರ್ ಪರಿಷತ್ತಿಗೆ ಬರದಿದ್ದರೆ?

ಆತ ಬರದಿದ್ದರೆ, ಇತರ ಸದಸ್ಯರು ಆತನ ಮನೆಗೆ ಹೋಗಿ ಆತನನ್ನು ಕರೆತರುವುದು ಎಂದು ನಿಶ್ಚಯಿಸಲಾಯಿತು. ಸಂಚುಕೋರರು ಬ್ರೂಟಸ್‌ನ ಮನೆಯಿಂದ ತೆರಳಿದಾಗ ಬೆಳಕು ಹರಿದಿತ್ತು. ಬ್ರೂಟಸ್‌ನ ಪತ್ನಿ 'ಪೋರ್ಷಿಯಾ'ಳಿಗೆ ಇವರು ಯಾರಿಗೆ ಹೆದರಿ ಮುಖಕ್ಕೆ ಮುಸುಕು ಹಾಕಿಕೊಂಡಿದ್ದಾರೆ? ಎಂದು ಆಶ್ಚರ್ಯವಾಯ್ತು.

ಬ್ರೂಟಸ್‌ನ ಮನಸ್ಥಿತಿ ಸರಿಯಿಲ್ಲವೆನಿಸಿತು ಪೋರ್ಷಿಯಾಳಿಗೆ. ಇತ್ತ ಸೀಜರನ ಮನೆಯಲ್ಲಿ, ಪರಿಷತ್ ಸಭೆಗೆ ಹೋಗಬೇಡವೆಂದು ಸೀಜರನ ಪತ್ನಿ ಒತ್ತಾಯಿಸುತ್ತಿದ್ದಳು.










ಈ ಹಿಂದೆ ಆಕೆಗೆ ಅನೇಕ ಭಯಂಕರ ಕನಸುಗಳು ಬಿದ್ದಿದ್ದುವು. ರಸ್ತೆಯಲ್ಲಿ ಸಿಂಹ ಓಡಾಡುತ್ತಿರುವಂತೆಯೂ, ಮೋಡದಿಂದ ರಕ್ತದ ಮಳೆ ಸುರಿಯುತ್ತಿರುವಂತೆ, ಇದರಿಂದ ಆಕೆ ವಿಚಲಿತಳಾದಳು. ಆದರೆ ಸೀಜರ್ ಮಾತ್ರ "ಹೇಡಿಗಳು ಸಾಯುವ ಮೊದಲೆ ಅನೇಕ ಸಾವುಗಳನ್ನು ಕಂಡಿರುತ್ತಾರೆ ಆದರೆ ಧೈರ್ಯವಂತರು ಸಾಯುವುದು ಒಮ್ಮೆ ಮಾತ್ರ" ಎಂದನು.




ಹೆಂಡತಿ ಸೀಜರನನ್ನು ತಡೆಯಲು ಪ್ರಯತ್ನಿಸುತ್ತಲೆ ಇದ್ದಳು. ತನ್ನ ಆರೋಗ್ಯ ಸರಿಯಿಲ್ಲವೆಂದು ಮಾರ್ಕ್ ಆಂಟನಿಯ ಮೂಲಕ ತಿಳಿಸುವಂತೆ ಒತ್ತಾಯಿಸಿದಳು. ಸೀಜರ್ ಹೆಂಡತಿಯ ಮಾತನ್ನು ಕೇಳುವ ಸ್ಥಿತಿಯಲ್ಲಿದ್ದನು, ಅಷ್ಟರಲ್ಲಿ ಡೀಸಿಯಸ್ (ಒಬ್ಬ ಸಂಚುಕೋರ) ಸೀಜರನ ಮನೆಗೆ ಬಂದು ಪರಿಷತ್ತಿಗೆ ಬರಲು ಒತ್ತಾಯಪಡಿಸಿದ. ಕನಸುಗಳನ್ನು ನಂಬಿ ಸಭೆಗೆ ಬರದಿದ್ದರೆ, ನಿನ್ನನ್ನು ಬಹಳ ಕೀಳಾಗಿ ಕಾಣುತ್ತಾರೆ ಎಂದೆಲ್ಲ ಹೇಳಿದ.

ಅಷ್ಟರಲ್ಲಿ ಅಲ್ಲಿಗೆ ಪುಬುಲಿಯಸ್, ಬ್ರೂಟಸ್, ಲಿಗೇರಿಯಸ್, ಸಿನ್ನ, ಮೆಟಲ್ಲಸ್ ಮತ್ತು ಟ್ರೆಬೋನಿಸ್ ಮುಂತಾದವರು ಬಂದು ಸೇರಿದರು.






ಈಗ "ನನ್ನಿಂದ ಸಭೆ ತಡವಾಗಿ ಶುರುವಾಗುವುದು ಬೇಡ!" ಎಂದು ನಿರ್ಧರಿಸಿದ ಸೀಜರ್ ಹೊರಟೆಬಿಟ್ಟ. ದಾರಿಯಲ್ಲಿ ನಾಗರಿಕನೊಬ್ಬನು ಸೀಜರನನ್ನು ತಡೆಯಲು ವಿಫಲನಾದ. ಕಣಿ ಹೇಳುವವನು ಮತ್ತೆ ಸೀಜರನನ್ನು ಎಚ್ಚರಿಸಿದ.



ಇತ್ತ ಬ್ರೂಟಸ್ ಮನೆಯಲ್ಲಿ ಪೋರ್ಷಿಯ ಆತಂಕಗೊಂಡಿದ್ದಳು. ವಿಚಾರ ತಿಳಿಯಲು ಸೇವಕನನ್ನು ಹೊರಗೆ ಕಳಿಸಿದ್ದಳು. ಸೀಸರನು ಸಭೆಗೆ ತೆರಳಿದಾಗ, ಸಂಚುಕೋರರು ಅಂಟನಿಯನ್ನು ಚಾಕಚಕ್ಯತೆಯಿಂದ ಸೀಜರನ ಪಕ್ಕದಿಂದ ಬೇರ್ಪಡಿಸಿದರು.



ಅಹವಾಲು ಪತ್ರಕ್ಕೆ ಸಹಿ ಪಡೆಯುವ ನೆಪ ಒಡ್ಡಿ ಸೀಜ಼ರನನ್ನು ಸಂಚುಕೋರರು ಸುತ್ತುವರೆದು, ತೀರ ಆತನ ಸನಿಹಕ್ಕೆ ಬಂದ್ದರು. ಸೀಜರನು ಪತ್ರವನ್ನು ಪರಿಶೀಲಿಸತೊಡಗಿದಾಗ, ಸಂಚುಕೋರರು ಆಕ್ರಮಣಕ್ಕೆ ಸಿದ್ಧರಾಗಿದ್ದರು.



ಕಾಸ್ಯನು ಎಲ್ಲರಿಗಿಂತ ಮೊದಲು ಸೀಜ಼ರನ ಕುತ್ತಿಗೆಯನ್ನು ಇರಿದನು. (ಹಿಂದಿನಿಂದ) ಅನಂತರ ಎಲ್ಲರೂ ಸೀಜ಼ರನ ಮೇಲೆ ಆಕ್ರಮಣ ಮಾಡಿದರು. ಸೀಜ಼ರನಿಗೆ ದಿಗ್ಭ್ರಾಂತಿಯಾಯಿತು. ಸೀಜ಼ರ್ ಇದರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಲೆ ಇದ್ದ, ಆಗ ಬ್ರೂಟಸ್ ಸೀಜ಼ರನನ್ನು ಬಲವಾಗಿ ಇರಿದುಬಿಟ್ಟ.







ಮಿತ್ರನಾಗಿದ್ದ ಬ್ರೂಟಸ್‌ನ ಈ ಚರ್ಯೆಯನ್ನು ನೋಡಿ ಆಶ್ಚರ್ಯಗೊಂಡ ಸೀಜ಼ರ್ ಹೇಳಿದ "ಅಹಾ! ಬ್ರೂಟಸ್, ನೀನು ಸಹ" ಹೀಗೆ ಹೇಳಿ ಸೀಜ಼ರ್ ಕೆಳಗೆ ಉರುಳಿ, ತನ್ನ ಹಳೆಯ ಶತ್ರು ಪಾಂಪೆಯ ಪ್ರತಿಮೆಯ ಬಳಿ ಬಿದ್ದ.


"ವಿಮುಕ್ತಿ, ಸ್ವತಂತ್ರ" ಎಂದು ಕೂಗುತ್ತ, ಸಂಚುಕೋರರು ಸೀಜ಼ರ್‌ನ ರಕ್ತದಲ್ಲಿ ಕೈತೊಳೆದರು. ತಮ್ಮ ಕತ್ತಿಗಳನ್ನು ಮೇಲೆತ್ತಿ ಜಯಗಳಿಸಿರುವವರಂತೆ ಮೆರೆದರು.



ಈ ವಿದ್ಯಮಾನಗಳು ಮಾರ್ಕ್ ಆಂಟನಿಗೆ ಆಘಾತವನ್ನು ಉಂಟುಮಾಡಿತ್ತು. ಆತ ಶೀಘ್ರವಾಗಿ ತನ್ನ ಮನೆ ಸೇರಿದ. ತನಗೆ ಪ್ರಾಣ ರಕ್ಷಣೆ ನೀಡಿದರೆ ಮಾತ್ರ ಅವರ ಬಳಿ ಬರುವುದಾಗಿ ಬ್ರೂಟಸ್‌ಗೆ ಹೇಳಿ ಕಳಿಸಿದ. ತನ್ನಿಂದ ಯಾರಿಗೂ ತೊಂದರೆಯಾಗುವುದಿಲ್ಲವೆಂದು ಸಂಚುಕೋರರನ್ನು ನಂಬಿಸಿದ.

ಮಾರ್ಕ್ ಆಂಟನಿ ಸೀಸರನ ಸಮಾಧಿಯಾಗುವಾಗ ಒಂದು ಭಾಷಣ ಮಾಡಲು ಅವಕಾಶ ಬೇಕೆಂದು ಕೋರಿದ. ಇದಕ್ಕೆ 'ಕಾಸಿಯಸ್' ಸಮ್ಮತಿಸಲಿಲ್ಲ. ಆದರೆ ಬ್ರೂಟಸ್, ಸತ್ತ ಸೀಸರನಿಗೆ ಗೌರವಪೂರ್ವದ ಅಂತ್ಯಕ್ರಿಯೆ ನಡೆಸಬೇಕಾದದ್ದು ತಮ್ಮ ಕರ್ತವ್ಯ ಎಂದು ತಿಳಿಸಿದ. ಅಂತ್ಯಕ್ರಿಯೆಯ ಸಮಯದಲ್ಲಿ, ಮೊದಲ ಭಾಷಣವನ್ನು ಬ್ರೂಟಸನೂ, ನಂತರದ ಭಾಷಣವನ್ನು ಆಂಟನಿ ಮಾಡುವುದೆಂದು ತೀರ್ಮಾನಿಸಲಾಯಿತು.







ರೋಮನ್ ನಾಗರಿಕರು ಸೀಜರನ ಕೊಲೆಯಿಂದ ಬಹಳ ವಿಚಲಿತಗೊಂಡರು. ಇದಕ್ಕೆ ಕಾರಣವನ್ನು, ಜನಸಂದಣಿಗೆ, ಬ್ರೂಟಸ್ ಮತ್ತು ಕಾಸಿಯಸ್ ಬೇರೆ ಬೇರೆ ಕಡೆ ಭಾಷಣ ಮಾಡಿ ತಿಳಿಸಿದರು.

ತನ್ನ ಭಾಷಣದಲ್ಲಿ ಬ್ರೂಟಸ್ ಈ ರೀತಿ ಹೇಳಿದ :

"ನಾನು ಸೀಜರನನ್ನು ಪ್ರೀತಿಸುತ್ತಿದ್ದೆ, ಆದರೆ ಅದಕ್ಕಿಂತ ಹೆಚ್ಚಾಗಿ ನಾನು ರೋಮನ್ ಪ್ರಜಾಪ್ರಭುತ್ವವನ್ನು ಪ್ರೀತಿಸುತ್ತೇನೆ. ಪ್ರಜಾಪ್ರಭುತ್ವವನ್ನು ಉಳಿಸಲು ಆತನನ್ನು ಕೊಲ್ಲಲಾಗಿದೆ. ಆತನ ಸಾವಿನಿಂದ ನಮಗೆ ದುಃಖವಾಗಿದೆ. ಆತನ ಶೌರ್ಯಕ್ಕೆ ನಮಗೆ ಗೌರವವಿದೆ ಆದರೆ ಆತನ ಆಕಾಂಕ್ಷೆಯೆ ಆತನಿಗೆ ಮರಣ ತಂದಿತು".



ಮಾರ್ಕ್ ಆಂಟನಿ, ಸೀಜ಼ರನ ಶವವನ್ನು ಪರಿಷತ್ ಭವನದಿಂದ ಪೇಟೆ ಚೌಕಕ್ಕೆ ತಂದಿರಿಸಿದ. ಆಂಟನಿಗೆ ಭಾಷಣ ಮಾಡಲು ತಿಳಿಸಿ ಬ್ರೂಟಸ್ ಹೊರಟುಹೋದ.

ಮಾರ್ಕ್ ಆಂಟನಿ ತನ್ನ ಭಾಷಣ ಶುರುಮಾಡಿದ.

"ಸ್ನೇಹಿತರೆ, ರೋಮನ್ನರೆ, ದೇಶ ಬಾಂಧವರೆ, ನಾನು ಈಗ ಬಂದಿರುವುದು ಸ್ನೇಹಿತ ಸೀಜ಼ರನ ಸಮಾಧಿ ಮಾಡಲು, ಆತನನ್ನು ಹೊಗಳುವುದಕ್ಕಲ್ಲ".





"ಸೀಜ಼ರ್ ತನಗೋಸ್ಕರ ಏನನ್ನೂ ಮಾಡಿಕೊಂಡಿಲ್ಲ. ಆತನ ಪ್ರತಿಯೊಂದು ಕೆಲಸವೂ ಪ್ರಜೆಗಳಿಗೆ ದೇಣಿಗೆಯಾಗಿದೆ. ಆತನೊಬ್ಬ ಬಡವರ ಬಂಧು, ಎಂದೂ ರಾಜನಾಗಲು ಬಯಸಿದವನಲ್ಲ. ಈ ವಿಚಾರ ಬಂದಾಗ ಆತ 'ಒಲ್ಲೆ' ಎಂದು ನಿರ್ದಾಕ್ಷಿಣ್ಯವಾಗಿ ತಿಳಿಸಿದ್ದ. ವಿಷಯ ಹೀಗಿದ್ದರೂ ಬ್ರೂಟಸ್‌ನ ಪ್ರಕಾರ ಸೀಜ಼ರ್‌ನಲ್ಲಿ ಈ ಆಸೆ ಇತ್ತು! ಬ್ರೂಟಸ್ ಒಬ್ಬ 'ಗುಣಗ್ರಾಹಿ', ಆದುದರಿಂದ, ನಾವು ಅವರ ಮಾತನ್ನು ಸಹ ಒಪ್ಪಬೇಕಾಗಿದೆ.







ಈ ವಿಷಯಗಳನ್ನು ಮಾರ್ಕ್ ಆಂಟನಿ ಜನಗಳಿಗೆ ಹೇಳುತ್ತ ಅನೇಕ ಬಾರಿ ದುಃಖತಪ್ತನಾದ.

ಮತ್ತೆ ಹೇಳಿದ "ಕ್ರೂರ ಪ್ರಾಣಿಗಳಿಗೆ ಸಹ ವಿಚಾರಣೆಯ ನಂತರ ಶಿಕ್ಷೆ ನೀಡಲಾಗುತ್ತದೆ. ಜನಗಳು ವಿವೇಕ ಶೂನ್ಯರಾಗಿದ್ದಾರೆ. ವಿವೇಕವನ್ನು ಕಡೆಗಣಿಸಿ ಭಾವನೆಗಳಿಗೆ ಎಡೆಮಾಡಿಕೊಟ್ಟಿದ್ದಾರೆ: ಬ್ರೂಟಸ್, ಕಾಸಿಯಸ್ ಮತ್ತು ಇತರ ಸಂಚುಕೋರರು ಸೀಜ಼ರನಿಗೆ ಘೋರ ಅನ್ಯಾಯವನ್ನೆಸಗಿದ್ದಾರೆ".



"ಈ ಘೋರ ಅನ್ಯಾಯಕ್ಕೆ ಇವರುಗಳು ದಂಡ ತೆರಲೇಬೇಕು ಇಂತಹ ಕೃತ್ಯವನ್ನು ನಮ್ಮ ಜನ ಸಹಿಸರು" ಹೀಗೆ ಹೇಳಿದ ಆಂಟನಿ ಸೀಜ಼ರನ ಮರಣ ಶಾಸನವನ್ನು ಜನರಿಗೆ ತೋರಿಸಿ, ಮರಣಶಾಸನವನ್ನು ಓದಲಿಲ್ಲ.

ಆಂಟನಿ, ಸೀಜ಼ರನ ಶವದ ಮೇಲೆ ಹೊದಿಸಿದ್ದ ಬಟ್ಟೆಯನ್ನು ಎತ್ತಿ ಹಿಡಿದು ಹೇಳಿದ :






"ನಿಮ್ಮ ಕಣ್ಣಿನ ನೀರು ಇನ್ನು ಬತ್ತಿಲ್ಲದಿದ್ದರೆ, ಅವುಗಳನ್ನು ಸುರಿಸುವ ಕಾಲ ಈಗ ಬಂದಿದೆ. ಈ ಬಟ್ಟೆಯನ್ನಾದರೂ ನೋಡಿರಿ! ಯಾವ ಪಾಪಕ್ಕೆ ಈ ಶಿಕ್ಷೆ?"

ಜನ ಕೂಗತೊಡಗಿದರು "ಆಹಾ! ಎಂತಹ ದೃಶ್ಯ, ಸೇಡು ಪಾಪಿಗಳಿಗೆ ಮರಣ!"





"ತಾಳ್ಮೆ ದೇಶಬಾಂಧವರೆ! ದಂಗೆಯನ್ನುಂಟು ಮಾಡುವುದು ನನ್ನ ಅಭಿಪ್ರಾಯವಲ್ಲ" ಎಂದ ಆದರೆ ಆಂಟನಿಯ ಉದ್ದೇಶ ಅದೇ ಆಗಿತ್ತು. ಅನಂತರ ಆಂಟನಿ ಸೀಜ಼ರ್‌ನ ಮರಣಶಾಸನವನ್ನು ಓದಿ ಹೇಳಿದ. ಅದರ ಪ್ರಕಾರ ಸೀಜ಼ರ್ ತನ್ನ ಸಂಪತ್ತು, ತೋಟ ಮುಂತಾದವುಗಳ ಅಧಿಕ ಭಾಗವನ್ನು ಸಾರ್ವಜನಿಕರ ಉಪಯೋಗಕ್ಕೆ ಕೊಡಮಾಡಿದ್ದ.



ಈಗ ಜನ ಉದ್ರೇಕಕ್ಕೆ ಒಳಗಾಗಿದ್ದರು. "ಪರಮ ದಯಾಳು ಸೀಜ಼ರ್; ನಿನ್ನನ್ನು ಕೊಂದವರ ಮೇಲಿನ ಸೇಡನ್ನು ತೀರಿಸಿಕೊಳ್ಳುತ್ತೇವೆ, ಅವರ ಮನೆಗೆ ಬೆಂಕಿ ಹಚ್ಚುತ್ತೇವೆ" ಎಂದು ಕೂಗತೊಡಗಿದರು. ಆಂಟನಿ ಅವರನ್ನು ಸಮಾಧಾನಪಡಿಸಲು ಯತ್ನಿಸಲಿಲ್ಲ, ಹಾಗೆ ನೋಡಿದರೆ ಆತನ ಉದ್ದೇಶವೇ ಜನರನ್ನು ಕೆರಳಿಸುವುದಾಗಿತ್ತು.



ಇದೆ ಸಮಯಕ್ಕೆ ಸರಿಯಾಗಿ 'ಆಕ್ಟೇವಿಯಸ್ ಸೀಜ಼ರ್' (ಈತ ಜೂಲಿಯಸ್ ಸೀಜ಼ರನ ಸೋದರನ ಮಗ) ಮತ್ತೊಬ್ಬ ಕುಲೀನ ರೋಮನ್ನನ ಜತೆ ನಗರ ಪ್ರವೇಶ ಮಾಡಿದ. ಇದರಿಂದ ಆಂಟನಿ ಬಹಳ ಸಂತೋಷಗೊಂಡ. ಜನಗಳು ಬ್ರೂಟಸ್, ಕಾಸಿಯಸ್‌ರನ್ನು ಹಿಡಿಯಲು ಹೊರಟರು, ಅವರು ನಗರದಿಂದಾಚೆಗೆ ಓಡಿಹೋಗಿದ್ದರು.



ಜನರು ಹುಚ್ಚರಂತಾಗಿದ್ದರು. ... ಸಿನ್ನನ್ನರಸಿ ಹೋಗುವಾಗ ಸಿಕ್ಕಿದ ಅದೇ ಹೆಸರಿನ ಮತ್ತೊಬ್ಬನನ್ನು ಹತ್ಯೆಮಾಡಿದರು.

ಈ ರೀತಿ ಸೀಜ಼ರನ ಹತ್ಯೆಯ ನಂತರ, ಆಂಟನಿ, ಆಕ್ಟೇವಿಯಸ್ ಮತ್ತು ಲಿಪಿಡಿಯಸ್ (ಆಕ್ಟೇವಿಯಸ್‌ನ ಸಂಗಡ ಇದ್ದ ರೋಮನ್ ಕುಲೀನ) ಮೂವರು ಸೇರಿ ಒಂದು ಆಡಳಿತದ ಮಂಡಲಿಯನ್ನು ಮಾಡಿಕೊಂಡರು.

ಈ ನಡುವೆ ಬ್ರೂಟಸ್ ಮತ್ತು ಕಾಸಿಯಸ್ 'ಏಷಿಯ ಮೈನರ್'ಗೆ ಓಡಿಹೋದರು.





ಆನಂತರ ಸಂಚುಕೋರರು ತಮ್ಮದೇ ಸೇನೆಯನ್ನು ಕಟ್ಟತೊಡಗಿದರು. ಈ ನಡುವೆ ಬ್ರೂಟಸ್‌ನ ಹೆಂಡತಿ ಪೋರ್ಷಿಯ ಮರಣ ಹೊಂದಿದ್ದಳು (ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಳು) ಬ್ರೂಟಸ್ ಇದನ್ನು ಸಮಾಧಾನದಿಂದ ಎದುರಿಸಿದ್ದ.






ಕಾಸಿಯಸ್ ಬ್ರೂಟಸ್‌ನ ಬಳಿ ಬಂದಾಗ, ಆತನಿಗೆ ಆಕ್ಟೇವಿಯಸ್ ಮತ್ತು ಆಂಟನಿ ದೊಡ್ಡಸೇನೆಯೊಂದಿಗೆ 'ಫಿಲಿಪ್ಪಿ' ಬಯಲು ಭೂಮಿಯ ಕಡೆಗೆ ಬರುತ್ತಿರುವಂತೆ ತಿಳಿದುಬಂತು. ಸಂಚುಕೋರರ ಸೇನೆ ಆಕ್ಟೇವಿಯಸ್‌ನ ಸೇನೆಯನ್ನು ಅದೇ ಬಯಲಿನಲ್ಲಿ ಎದುರಿಸಬೇಕೆಂದು ಬ್ರೂಟಸ್ ಹೇಳಿದ, ಆದರೆ ಇದು ಕಾಸಿಯಸ್‌ಗೆ ಸರಿ ಎನಿಸಲಿಲ್ಲ. ಆದರೆ ಬ್ರೂಟಸ್, ತಮಗೆ ಇದು ಉತ್ತಮ ಅವಕಾಶ ಎಂದಾಗಿ, ಕಾಸಿಯಸ್ ಒಪ್ಪಿಕೊಂಡ.



ಕಾಸಿಯಸ್ ಹೊರಟು ಹೋದ ನಂತರ ಬ್ರೂಟಸ್ ಮಲಗಲು ನಿಶ್ಚಯಿಸಿದ. ತನ್ನ ಸೇವಕನಿಗೆ ಯಾವುದಾದರು ವಾದ್ಯ ನುಡಿಸಲು ಹೇಳಿ ಮಲಗಿದ. ಆತನಿಗೆ ಮಂದವಾದ ಬೆಳಕಿನಲ್ಲಿ ಜೂಲಿಯಸ್ ಸೀಜ಼ರ್ ಬಂದಂತೆ ಕಾಣಿಸಿತು.





ಬ್ರೂಟಸ್ ಭಯಭೀತನಾದ.

"ನೀನು ನನ್ನನ್ನು 'ಫಿಲಿಪ್ಪಿ' ಬಯಲಿನಲ್ಲಿ ಸಂಧಿಸುವೆ" ಎಂದು ಸೀಜ಼ರನ ಭೂತ ಹೇಳಿದಂತಾಯಿತು. ಆನಂತರ ಅದು ಮಾಯವಾಯಿತು, ಆದರೆ ಬ್ರೂಟಸ್‌ನ ಸೇವಕ ಇದನ್ನು ಕಂಡಿರಲಿಲ್ಲ.





ಆದರೆ ಸೀಜ಼ರ್‌ನ ಆತ್ಮ ಬಂದು ಮಾತನಾಡಿದ ಬಗ್ಗೆ ಬ್ರೂಟಸ್‌ಗೆ ಸಂಶಯವೆ ಇರಲಿಲ್ಲ. ಇನ್ನು ತಡಮಾಡುವುದು ಸರಿಯಿಲ್ಲವೆಂದೂ, ತಕ್ಷಣವೆ ಫಿಲಿಪ್ಪಿ ಮೈದಾನಕ್ಕೆ ಸೇನೆಯನ್ನು ಕಳಿಸಬೇಕೆಂದು ನಿರ್ಧರಿಸಿದ ಬ್ರೂಟಸ್. ಸೇನೆ ಹೊರಟಾಗ ಅಲ್ಲಿ ಅವರಿಗೆ ಅನೇಕ ಕೆಟ್ಟ ಶಕುನಗಳು ಗಮನಕ್ಕೆ ಬಂದುವು.





ಎರಡೂ ಸೇನೆಗಳು ಫಿಲಿಪ್ಪಿ ಬಯಲಿನಲ್ಲಿ ಬಿಡಾರ ಮಾಡಿದ್ದುವು. ಆಂಟನಿಯ ಸೇನೆಯ ಮೇಲೆ ಆಕ್ರಮಣ ಮಾಡಲು ಬ್ರೂಟಸ್ ತನ್ನ ಸೇನೆಗೆ ಆಜ್ಞೆ ಮಾಡಿದ.

ಈ ವಿಷಯದಲ್ಲಿ ಬ್ರೂಟಸ್ ಸ್ವಲ್ಪ ಆತುರದಲ್ಲಿದ್ದ. ಇದರಿಂದ ಬ್ರೂಟಸ್‌ನ ಸೇನೆ, ಆಂಟನಿಯ ಸೇನೆಯಿಂದ ಸುತ್ತುವರೆಯಲ್ಪಟ್ಟಿತು.




ಕಾಸಿಯಸ್‌ಗೆ ತನ್ನ ಬಿಡಾರ ಹತ್ತಿ ಉರಿಯುತ್ತಿರುವಂತೆ ಕಂಡುಬಂದಿತು. ಆ ಬಿಡಾರದ ಬಳಿಯಿರುವ ಸೈನಿಕರು ತಮ್ಮವರೋ ಅಥವಾ ಶತ್ರುಗಳ ಕಡೆಯವರೋ ತಿಳಿದು ಬರಲು ಆತ ಟಿಟಾನಿಯಸ್‌ನನ್ನು ಕಳಿಸಿದ. ಹಾಗೆ ಹೋದ ಟಿಟಾನಿಯಸ್‌ನನ್ನು ಗಮನಿಸಲು ಪಿಂಡಾರಸ್‌ನನ್ನೂ ಸಹ ಕಳಿಸಿದ. ಬಿಡಾರದ ಬಳಿ ಸೈನಿಕರು ಟಿಟಾನಿಯಸ್‌ನನ್ನು ಇಳಿಸಿಕೊಳ್ಳುವುದನ್ನು ಕಂಡನು ಅವರು ಕಾಸಿಯಸ್ ಕಡೆಯ ಸೈನಿಕರೆ ಆಗಿದ್ದರು.





ಪಿಂಡಾರಸ್ ಇದನ್ನು ಅಪಾರ್ಥ ಮಾಡಿಕೊಂಡು ತಮ್ಮ ಸೇನೆ ಸೋತಿದೆ ಎಂದು ಕಾಸಿಯಸ್‌ಗೆ ತಿಳಿಸಿದ. ಆಗ ಕಾಸಿಯಸ್ ತನ್ನ ಕತ್ತಿಯನ್ನು ಪಿಂಡಾರಸನಿಗೆ ಕೊಟ್ಟು ಹೇಳಿದ: "ಸೀಜ಼ರನನ್ನು ಮುಗಿಸಿದ ಈ ಕತ್ತಿಯಿಂದಲೆ ನನ್ನನ್ನೂ ಮುಗಿಸು" ಪಿಂಡಾರಸ ಆಜ್ಞೆಯನ್ನು ಪಾಲಿಸಿದ.






ಸಂಜೆ ಟಿಟಾನಿಯಸ್ ಬಂದು ತಾವು ಜಯಶೀಲರಾಗಿರುವ ಸಂಗತಿ ತಿಳಿಸುವುದರೊಳಗೆ ಪಿಂಡಾರಸನ ತಪ್ಪಿನಿಂದ ಅನರ್ಥ ನಡೆದು ಹೋಗಿತ್ತು.



ಇದರಿಂದ ದುಃಖಿತನಾದ ಟಿಟಾನಿಯಸ್ ತಾನು ಸಹ ಆತ್ಮಹತ್ಯೆ ಮಾಡಿಕೊಂಡ. ಈ ಸಮಯದಲ್ಲಿ ಅಲ್ಲಿಗೆ ಬಂದ ಬ್ರೂಟಸ್ ಶವಗಳನ್ನು ನೋಡಿದ :



“ಓ ಜೂಲಿಯಸ್ ಸೀಜರ್, ನೀನಿನ್ನೂ ಪ್ರಬಲನಾಗಿಯೇ ಇರುವೆ ನಿನ್ನ ಆತ್ಮ ಓಡಾಡುತ್ತಿದೆ, ನಮ್ಮ ಕತ್ತಿಯಿಂದಲೇ ನಾವು ಸಾಯುವಂತೆ ಮಾಡುತ್ತಿದೆ”. ಬ್ರೂಟಸ್ ತನ್ನ ಸೇನೆಯೊಡನೆ ಆಂಟನಿಯ ಮೇಲೆ ಯುದ್ಧ ಮಾಡಿದ.

ಆದರೆ ಈ ಬಾರಿ ಗೆಲವು ಆಂಟನಿಯದಾಗಿತ್ತು. ಬ್ರೂಟಸ್‌ನ ಬಹುತೇಕ ಮಿತ್ರರು ಮರಣ ಹೊಂದಿದ್ದರು. ಬ್ರೂಟಸ್ ದುಃಖತಪ್ತನಾಗಿ ಒಂದು ಬಂಡೆಯ ಮೇಲೆ



ಬ್ರೂಟಸ್ ತನ್ನ ಸೈನಿಕರಿಗೆ ತನ್ನನ್ನು ಕೊಂದುಬಿಡಲು ಆಜ್ಞೆ ಮಾಡಿದ “ನನ್ನ ಸಮಯ ಸನ್ನಿಹಿತವಾಗಿದೆ. ಸೀಜರನ ಆತ್ಮವನ್ನು ನೋಡಿದೆ” ಎಂದ.



ಅನೇಕರು ಇದಕ್ಕೆ ಒಪ್ಪದಿದ್ದರೂ 'ಸ್ಟ್ರಾಟೊ' ಎಂಬ ಒಬ್ಬ ಸೈನಿಕ ಮಾತ್ರ ಬ್ರೂಟಸ್‌ನ ಆತ್ಮಹತ್ಯೆಗೆ ಸಹಾಯ ಮಾಡಿದ. ಸೈನಿಕ ಕತ್ತಿಯನ್ನು ಬಲವಾಗಿ ಹಿಡಿದು ನಿಂತಿರುವಾಗ, ಎದುರಿನಿಂದ ಓಡಿ ಬಂದು ಕತ್ತಿಯ ಮೇಲೆ ಬಿದ್ದು ಪ್ರಾಣ ನೀಗಿದ ಬ್ರೂಟಸ್.





ಆಂಟನಿ ಕಡೆಯವರು ಬಂದು ನೋಡಿದಾಗ ಬ್ರೂಟಸ್ ಗತಪ್ರಾಣನಾಗಿದ್ದ. ಅವನ ಅಂತ್ಯಕ್ರಿಯೆಯನ್ನು ಗೌರವದಿಂದ ನಡೆಸಿ ಕೊಡಲಾಯಿತು. ಬ್ರೂಟಸ್ ಒಬ್ಬ ಒಳ್ಳೆಯ ವ್ಯಕ್ತಿಯೆ. ಆದರೆ ಸಂಚುಕೋರರ ಪ್ರಭಾವದಿಂದ ಈ ಸ್ಥಿತಿಗೆ ಬಂದಿದ್ದ.

ಈಗ ಮೂವರ ಮಂಡಲಿಯಲ್ಲಿ ಸಹ ಒಳ ಜಗಳ ಶುರುವಾಗಿದ್ದು ಆಕ್ಟೇವಿಯಸ್ ಲಿಪಿಡಿಯಸ್‌ನನ್ನ ಗಡಿಪಾರು ಮಾಡಿದ. ಆಂಟನಿಯನ್ನು ಸೋಲಿಸಿ ರೋಮನ್ ಚಕ್ರವರ್ತಿಯಾದ. ಹೀಗೆ ರೋಮ್ ದೇಶ ತನ್ನ ಪ್ರಜಾಪ್ರಭುತ್ವವನ್ನು ಕಳೆದುಕೊಂಡಿತು.

